**OS.No.**1/2021 **DW**-1

**ದಿನಾಂಕಃ 17.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ವಾದಿಯ ಪರ ಶ್ರೀ. ಕೆ ಕೆ ಆರ್ . ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ . ನನ್ನ ತಂದೆಯ ಹೆಸರು ಮಲ್ಲಿಕಾರ್ಜುನ ತಾಯಿಯ ಹೆಸರು ಗೌರಮ್ಮ ಎಂದರೆ ಸರಿ . ನಮ್ಮ ತಂದೆ ತಾಯಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ . ನಾನೇ ಹಿರಿಯ ಮಗ ಎಂದರೆ ಸರಿ . 2 ನೇ ಸಹೋದರ ಗುರುಮಲ್ಲೇಶ ಫೌತಿ ಆಗಿದ್ದಾರೆ ಎಂದರೆ ಸರಿ . ವಾದಿಯು ನನ್ನ ಸಹೋದರಿ ಎಂದರೆ ಸರಿ . 3ನೇ ಪ್ರತಿವಾದಿ ಬಾಗೀವಾಳು ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ . ನನ್ನ ತಂದೆ 2018ರಲ್ಲಿ ಫೌತಿ ಆಗಿರುತ್ತಾರೆ . ನನ್ನ ತಂದೆ ಜೀವಂತ ಇದ್ದಾಗ ಅವರೇ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ . ನನ್ನ ತಂದೆ ತೀರಿಕೊಂಡ ನಂತರ ನಾನೇ ಮನೆಯ ಯಜಮಾನಿಕೆ ನಡೆಸುತ್ತಿದ್ದೆ ಎಂದರೆ ಸಾಕ್ಷಿ ಇಲ್ಲ, ಮೃತ ಗುರು ಮಲ್ಲೇಶ ಯಜಮಾನಿಕೆ ಮಾಡುತ್ತಿದ್ದರು ಎಂದು ನುಡಿಯುುತ್ತಾರೆ. ಮೃತ ಗುರುಮಲ್ಲೇಶ ಅವರು ಅವಿವಾಹಿತರಾಗಿದ್ದರು ಎಂದರೆ ಸರಿ .

ನನ್ನ ತಂದೆ ಮಲ್ಲೀಕಾರ್ಜುನಯ್ಯ ಅವರು ಮೂಲತಃ ಅರಕಲಗೂಡ ತಾಲ್ಲೂಕು ಬೇಲಿಕರ್ಪುರವಳ್ಳಿ ಗ್ರಾಮದವರು ಎಂದರೆ ಸರಿ . ನನ್ನ ತಂದೆ ನನ್ನ ತಾಯಿ ಗೌರಮ್ಮನ ಮನೆ ಬಾಗೀವಾಳು ಗ್ರಾಮಕ್ಕೆ ಮನೆಯ ಅಳಿಯನಾಗಿ ಬಂದಿರುತ್ತಾರೆ ಎಂದರೆ ಹೌದು . ನನ್ನ ತಾಯಿಗೆ ಇಬ್ಬರು ಸಹೋದರಿಯರಿದ್ದರು . ಅವರ ಹೆಸರುಗಳೆಂದರೆ ಪಾರ್ವತಮ್ಮ ಮತ್ತು ಗಂಗಮ್ಮ. ಪಾರ್ವತಮ್ಮ ಮತ್ತು ಗಂಗಮ್ಮ ಅವರ ಆಸ್ತಿಯ ಹಕ್ಕನ್ನು ನನ್ನ ತಾಯಿ ಗೌರಮ್ಮಾಳಿಗೆ ಹಕ್ಕು ಖುಲಾಸೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಆಸ್ತಿಯನ್ನು ನನ್ನ ತಾಯಿ ಒಬ್ಬಳೇ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ . ಪಾರ್ವತಮ್ಮ

ಮತ್ತು ಗಂಗಮ್ಮಳಿಗೆ ತಲಾ 20 ಗುಂಟೆ ಆಸ್ತಿಯನ್ನು ಕೊಟ್ಟಿದ್ದರು ಅವರು ಈಗಾಗಲೇ ಅದನ್ನು ಮಾರಾಟ ಮಾಡಿರುತ್ತಾರೆ. 20 ಗುಂಟೆ ಆಸ್ತಿಯನ್ನು ಅವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ನಮಗಲ್ಲ. ದಾವಾ ಆಸ್ತಿಗಳನ್ನು ನಾನು ಮತ್ತು 3ನೇ ಪ್ರತಿವಾದಿ ಮಾತ್ರ ವಿಭಾಗ ಮಾಡಿಕೊಂಡು ಅನುಭವಿಸುತ್ತಿದ್ದೇವೆ ಎಂದರೆ ಸಾಕ್ಷಿ ಮೃತ ಗುರುಮಲ್ಲೇಶ ಮತ್ತು ನಮ್ಮ ತಾಯಿ ನಮಗೆ ಆಸ್ತಿಯನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿದಾರರು ವಕೀಲರ ಸಲಹೆಗೆ ಸರಿಯಾಗಿ ಉತ್ತರಿಸದೇ ಇದ್ದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.